

# ಆವೆ ಮಣ್ಣಿನ ಕಲಾಕೃತಿ

## ಪ್ರಕೃತಿ ಪ್ರೀತಿಗೆ ಕಲೆಯೇ ಮಾಧ್ಯಮ

**ಮಂಗಳೂರು ಹೆಂಚನ್ನು ತಯಾರಿಸುವ ಆವೆಮಣ್ಣಿನಲ್ಲಿ ಸುಂದರ ಕಲಾಕೃತಿ ರಚಿಸುವ ಉಡುಪಿಯ ಗಾಯತ್ರಿ ನಾಯಕ, ಪ್ರಕೃತಿ ಪ್ರೀತಿಗಾಗಿ ಕಲೆಯನ್ನು ಮಾಧ್ಯಮವಾಗಿಸಿದ್ದಾರೆ.**

■ ಚಿತ್ರ ಲೇಖನ: **ಬಳಕೂರು ವಿ.ಎಸ್. ನಾಯಕ**

ಅಳಿವಿನಂಚಿನಲ್ಲಿರುವ ಪಕ್ಷಿ ಸಂಕುಲವನ್ನು ರಕ್ಷಿಸಿ ಎಂದು ಸಂದೇಶ ಸಾರುವ ಶಿಲ್ಪ, ನೀರನ್ನು ಕಲುಷಿತ ಮಾಡದೆ ಉಳಿಸಿ ಎಂಬ ಸಂದೇಶವನ್ನು ಬಿಂಬಿಸುವ ಶಿಲ್ಪ ಕುಟುಂಬ ವ್ಯವಸ್ಥೆಯ ಮಹತ್ವವನ್ನು ಅರಿವು ಮೂಡಿಸುವ ಶಿಲ್ಪ, ಮನೆ, ಮಕ್ಕಳು, ತಾಯಿ, ಹುಡುಗಿ ಹೀಗೆ ಕುಟುಂಬ ವ್ಯವಸ್ಥೆಯನ್ನು ಬಿಂಬಿಸುವ ಶಿಲ್ಪ, ಜಗತ್ತಿಗೆ ಶಾಂತಿಯ ಮಂತ್ರ ಸಾರಿದ ಬುದ್ಧನ ಶಿಲ್ಪ ಹೀಗೆ ಒಂದೇ ಎರಡೆ ಕಲಾವಿದನ ಕೈಚಳಕದಲ್ಲಿ ಜೀವ ತುಂಬಿ ಕಲಾಸಕ್ತರ ಮಡಿಲಿಗೆ ಅರ್ಪಿಸಿ ಜನ ಮೆಚ್ಚುಗೆ ಪಡೆದವರು ಉಡುಪಿಯ ಕಟಪಾಡಿಯ ಕಲಾವಿದೆ ಗಾಯತ್ರಿ ಜಗದೀಶ್ ನಾಯಕ.

ಓದಿದ್ದು ಬಿ.ಕಾಂ ಪದವಿ. ಗೃಹಿಣಿ. ಚಿಕ್ಕವಯಸ್ಸಿನಲ್ಲಿಯೇ ಕಲಾಸಕ್ತಿ ಬೆಳೆಸಿಕೊಂಡವರು. ಶಾಲಾ ದಿನಗಳಲ್ಲಿ ಕಲೆಗೆ ಭಾವಪರವಶರಾಗಿ ಅವರ ಮನಸ್ಸು ವಿಭಿನ್ನ ಕಲಾ ಪ್ರಕಾರಗಳನ್ನು ಕಲಿಯಬೇಕು, ತಿಳಿಯಬೇಕು ಎಂಬ ಛಲ ಹುಟ್ಟಿಸಿಕೊಂಡವರು. ಅದಕ್ಕಾಗಿ ಮೊದಲು ಇವರು ಕಲಾವಿದ ರಮೇಶ್‌ರಾವ್‌ರವರ ಉಡುಪಿಯ ದೃಶ್ಯ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಸುಮಾರು ಐದು ವರ್ಷಗಳ ವಿಭಿನ್ನ ಕಲಾಕೃತಿಗಳನ್ನು ರಚಿಸುವ ತರಬೇತಿಯನ್ನು ಪಡೆದರು. ನಂತರ ಕಲಾವಿದ ಶೈಲೇಶ್ ಕೋಟ್ಯಾನ್‌ರವರ ಮಾರ್ಗದರ್ಶನದಲ್ಲಿ ಕಲೆಯನ್ನು ಅಧ್ಯಯನ ಮಾಡಿದರು. ಸತತ ಸಾಧನೆ, ಪ್ರಯತ್ನ, ಆತ್ಮವಿಶ್ವಾಸದ ಫಲವಾಗಿ ಇಂದು ಒಬ್ಬ ಅದ್ಭುತ ಕಲಾಪ್ರತಿಭೆಯಾಗಿ ಹೊರಹೊಮ್ಮಿದ್ದಾರೆ.



ಇವರಿಗೆ ಕಲಾಸಕ್ತಿ ಮೂಡಲು ಕಾರಣ ಮುಖ್ಯವಾಗಿ ನಿಸರ್ಗ. ಇದು ಒಂದು ದಿನ ಇದ್ದ ಹಾಗೆ ಇನ್ನೊಂದು ದಿನ ಕಾಣುವುದಿಲ್ಲ. ಆದ್ದರಿಂದ ಕಲಾವಿದರಾದ ಇವರು ನಿಸರ್ಗದಲ್ಲಿ ಇರುವ ಬದಲಾವಣೆಯನ್ನು ಗಮನಿಸಿ ತಮ್ಮದೇ ರೀತಿಯಲ್ಲಿ ಕಲಾಕೃತಿಗಳನ್ನು ಶಿಲ್ಪಗಳನ್ನು ಮಾಡಬೇಕೆಂಬ ಆಸಕ್ತಿ ಮೂಡಿಸಿಕೊಂಡರು. ನಂತರದ ದಿನಗಳಲ್ಲಿ ಇವರ ಕಲಾಸಕ್ತಿ ಗುರುತಿಸಿ ಪ್ರೋತ್ಸಾಹ ನೀಡಿದವರು ಪ್ರಸಿದ್ಧ ಕಲಾವಿದರಾದ ವೆಂಕಿ ಪಲಿಮಾರ್.

ಆವೆ ಮಣ್ಣಿನಲ್ಲಿ ಕಲಾಕೃತಿ ರಚಿಸಿ ಕಣ್ಮನ ಸೆಳೆಯುವಂತೆ ಮಾಡಿದ್ದಲ್ಲದೆ ಈ ಕಲಾಕೃತಿಗಳು ಜನಮಾನಸದಲ್ಲಿ ಅಚ್ಚಳಿಯದೇ ಉಳಿಯುವ ಹಾಗೆಯೂ ಮಾಡಿದ್ದು ಇವರ ಹೆಚ್ಚುಗಾರಿಕೆ. ಕರಾವಳಿಯಲ್ಲಿ ಹೆಂಚನ್ನು ತಯಾರಿಸಲು ಬಳಸುವ ಆವೆ ಮಣ್ಣಿನಿಂದ ವಿಭಿನ್ನ

